ಆ) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಭಾರತ ಸರ್ಕಾರದಿಂದ ಅನುಮೋದಿಸಲಾದ ಕಾರ್ಯ ಯೋಜನೆಯ ಅನುಸಾರ ಅರಣ್ಯದಲಿ ಬಿದ್ದ ಮರಗಳನ್ನು ತೆಗೆಯಬಹುದಾಗಿದೆ.

ಮರಮಟ್ಟುಗಳನ್ನು ಸರ್ಕಾರಿ ನಾಟಾ ಡಿಪೋವಿಗೆ ಸಾಗಿಸಿ ಬಹಿರಂಗ ಹರಾಜಿನಲ್ಲಿ ವಿಲೇ ಮಾಡಲಾಗುತ್ತದೆ.

ಅದಲ್ಲದೆ ಮರಗಳನ್ನು ಸರ್ಕಾರವು ನಿಗದಿಪಡಿಸಿರುವ ದರಗಳಲ್ಲಿ ಜನರಿಗೆ ಸ್ವಂತ ಬಳಕೆಗೆ ಮಂಜೂರು ಮಾಡಲು ಅವಕಾಶವಿರುತ್ತದೆ.

ಈ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

736(980) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ(ಕುಂಭಾಪುರ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಕ್ರಮ-ಸಕ್ರಮ ಜಮೀನುಗಳಿಗೆ ಸಂಬಂಧಿಸಿದಂತೆ, ಅಕ್ರಮ ಜಮೀನು ಸಕ್ರಮೀಕರಣಗೊಳಿಸಲು ಕಂದಾಯ ಇಲಾಖೆಯವರು ಅರಣ್ಯ ಇಲಾಖೆಯ ಅಭಿಪ್ರಾಯ ಕೇಳಿದ ಕಡತಗಳಿಗೆ ಅಭಿಪ್ರಾಯ ನೀಡುವಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಲ್ಲಿ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಅಕ್ರಮ-ಜಮೀನು ಸಕ್ರಮೀಕರಣಕ್ಕೆ ಸಂಬಂಧಪಟ್ಟಂತೆ ಎಷ್ಟು ಕಡತಗಳು ಅರಣ್ಯ ಇಲಾಖೆಗೆ ಬಂದಿರುತ್ತವೆ.

ಇ) ಸದರಿ ಕಡತಗಳಲ್ಲಿ ಇರುವ ಫಲಾನುಭವಿಗಳ ಸಂಖ್ಯೆ ಎಷ್ಟು;

ಈ) ಅಭಿಪ್ರಾಯ ನೀಡುವಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವುದರಿಂದ ಅರ್ಜಿದಾರರಿಗೆ ತೊಂದರೆಯಾಗುತ್ತಿದ್ದು ಈ ಬಗ್ಗೆ ಅಭಿಪ್ರಾಯ ನೀಡಲು ಕಾಲಮಿತಿ ನಿಗಧಿಗೊಳಿಸಿ ನಿರ್ದೇಶನ ನೀಡುವುದೇ?

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ(ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಅರಣ್ಯ ಇಲಾಖೆಯಿಂದ ವಿಳಂಬ ಧೋರಣೆ ಆಗಿರುವುದಿಲ್ಲ.

ಆ) ಅಕ್ರಮ ಜಮೀನು ಸಕ್ರಮೀಕರಣಕ್ಕೆ ಒಟ್ಟು 652 ಕಡತಗಳು ಇಲಾಖೆಗೆ ಬಂದಿರುತ್ತವೆ.

ಇ) ಒಟ್ಟು 1241 ಫಲಾನುಭವಿಗಳು ಇರುತ್ತಾರೆ.

ಈ) ಅಭಿಪ್ರಾಯ ನೀಡುವಲ್ಲಿ ಯಾವುದೇ ವಿಳಂಬ ಉಂಟಾಗಿರುವುದಿಲ್ಲ.

738(982) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ(ಕುಂದಾಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಕುಮ್ಕಿ ಹಕ್ಕು ಎಂದರೇನು ಹಾಗೂ ಹಕ್ಕು ಮಂಜೂರು ಮಾಡುವ ಮಾನದಂಡ ಯಾವುದು;

ಆ) ಕುಮ್ಕಿ ಹಕ್ಕಿನ ಪರಿಮಿತಿ ಎಷ್ಟು;

ಇ) 1964ನೇ ಇಸವಿಯವರೆಗೆ ಕುಮ್ಕಿ ಹಕ್ಕುಗಳನ್ನು ರೆಗ್ಯೂಲರೈಸ್ ಮಾಡಿದ್ದು, ಅನಂತರ ರೆಗ್ಯೂಲರೈಸ್ ಮಾಡದಿರಲು ಕಾರಣವೇನು;

ಈ) ಕುಮ್ಕಿ ಹಕ್ಕು ರೆಗ್ಯೂಲರೈಸ್ ಮಾಡುವುದು ನಿಲ್ಲಿಸಿರುವುದರಿಂದ ಗ್ರಾಮಸ್ಥರು ತ್ರಿಶಂಕು ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ ಕುಮ್ಕಿ ಹಕ್ಕು ಯಾವ ರೀತಿಯಲ್ಲಿ ಇತ್ಯರ್ಥ ಪಡಿಸಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) ಹಿಂದಿನ ಮದ್ರಾಸ್ ಪ್ರಾಂತ್ಯದ ಬೋರ್ಡ್ಸ್ ಸ್ಟ್ಯಾಂಡಿಂಗ್ ಆರ್ಡರ್ 15 (40) ರಲ್ಲಿ ಕುಮ್ಕಿ ಜಮೀನಿಗೆ ಈ ರೀತಿ ವಿವರಣೆ ನೀಡಲಾಗಿದೆ. 1276ರ ಫಸಲಿ ಪೂರ್ವದಲ್ಲಿ (ಅಂದರೆ 1862ನೇ ಸಾಲಿನಲ್ಲಿ) ಗುರುತಿಸಲ್ಪಟ್ಟು ಖಾತೆಯಲ್ಲಿ ಸೇರಿಸಿದ ತೀರ್ವೆ ಹೊರಿಸಿದ ಕದಿಂ ಜಮೀನಿನ 100 ಗಜದ ಪರಿಮಿತಿಯಲ್ಲಿರುವ (450 ಲಿಂಕ್ಸ್) ಸರ್ಕಾರಿ ಅನಾಧೀನ ಜಮೀನು ಕುಮ್ಕಿ ಜಮೀನಾಗಿದೆ. ಕುಮ್ಕಿ ಹಕ್ಕನ್ನು ಅನುಭವಿಸುವವನೇ ಕುಮ್ಕಿದಾರನು ಕುಮ್ಕಿ ಹಕ್ಕು ಹೊಂದಿರುವ ಜಮೀನಿನ ವ್ಯಕ್ತಿಯು ಖಾತೆದಾರನಾಗಿರಬಹುದು. ವಳವರ್ಗದಾರನಾಗಿರಬಹುದು. ಅಥವಾ ಮೂಲ ಗೇಣಿದಾರನಾಗಿರಬಹುದು.

ಕುಮ್ಕಿದಾರನು ಕುಮ್ಕಿ ಜಮೀನಿನಲ್ಲಿ ತನ್ನ ಜಾನುವಾರುಗಳನ್ನು ಮೇಯಿಸಬಹುದು. ತರಗೆಲೆಗಳನ್ನು ಉಪಯೋಗಿಸಿ ಗೊಬ್ಬರವನ್ನು ಸಂಗ್ರಹಿಸಬಹುದು. ತನ್ನ ಕೃಷಿ ಹಾಗೂ ಗೃಹ ಕೃತ್ಯದ ಉದ್ದೇಶಗಳಿಗಾಗಿ ಕಾಡುತ್ಪತ್ತಿಯನ್ನು ಸಂಗ್ರಹಿಸುವ ಹಕ್ಕುಳ್ಳವನಾಗಿರುತ್ತಾನೆ.

ಕುಮ್ಕಿದಾರನಲ್ಲದವನು ಕುಮ್ಕಿ ಸ್ಥಳದಲ್ಲಿ ಆಕ್ರಮಣ ಮಾಡಿ ಅನುಭೋಗಿಸಿದಲ್ಲಿ, ಕುಮ್ಕಿದಾರನು ಆಕ್ರಮಣದ ದಿನಾಂಕದಿಂದ 6 ತಿಂಗಳ ಒಳಗೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರತಕ್ಕದ್ದು. ತಪ್ಪಿದಲ್ಲಿ ಕುಮ್ಕಿ ಹಕ್ಕನ್ನು ತನ್ನಿಂದ ತಾನೇ ಕಳಕೊಳ್ಳುತ್ತಾನೆ.

ಆ) ಕುಮ್ಕಿ ಜಮೀನನ್ನು ಕುಮ್ಕಿದಾರನು ಹೊಂದಿರುವ ವರ್ಗದ (ಪಟ್ಟಾ) ನಂಜ ಬಾಗಾಯ್ತು. ಜಮೀನಿನ ಪ್ರತಿ 1 ಎಕರೆಗೆ 2 ಎಕರೆ ಪುಂಜ ಜಮೀನಿನ ಅನುಪಾತ ಇದೆ.

ಇ) 1964ರ ಕರ್ನಾಟಕ ಭೂ ಕಂದಾಯ ಅಧಿನಿಯಮ ದಿ:1.04.1964 ರಂದು ಜಾರಿಗೆ ಬಂದಿರುತ್ತದೆ. ಈ ಕಾಯಿದೆಯ ಕಲಂ 79(2) ರಂತೆ, ನಿಕಟ ಪೂರ್ವದ ಬೋರ್ಡಿನ ಸ್ಟ್ಯಾಂಡಿಂಗ್ ಆರ್ಡರ್‌ದಂತೆ ಕುಮ್ಕಿದಾರನು ಹೊಂದಿರುವ ಕುಮ್ಕಿ ಹಕ್ಕು ಸಹಾ ಮುಂದುವರಿಯುತ್ತದೆ. ಅಲ್ಲದೆ ದಿ: 1.04.1964ರಿಂದ ಜಾರಿಗೆ ಬಂದಿರುವ ಕರ್ನಾಟಕ ಭೂ ಕಂದಾಯ ಕಾಯಿದೆಯ ಕಲಂ 79(2) ರಲ್ಲಿ ಕುಮ್ಕಿ ಜಮೀನಿನ ವಿಶೇಷ ಸೌಲಭ್ಯವನ್ನು ಮಾತ್ರ ಮುಂದುವರಿಸಿದ್ದು, ಕುಮ್ಕಿ ಜಮೀನನ್ನು ಮಂಜೂರಾತಿಗೆ ಅವಕಾಶ ನೀಡಿರುವುದಿಲ್ಲ. ಈ ವಿಚಾರವನ್ನು ಸರ್ಕಾರದ ಸುತ್ತೋಲೆ ಸಂ:ಆರ್‌ಡಿ 5 ಎಲ್‌ಜಿಯು 72, ದಿನಾಂಕ 01/05.1973 ರಲ್ಲಿ ವಿಷಧಪಡಿಸಲಾಗಿದೆ. ನಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964ಕ್ಕೆ ತಂದ ತಿದ್ದುಪಡಿ ಕಲಂ 94ಬಿ ದಿನಾಂಕ:1.1.98 ರಿಂದ ಜಾರಿಗೆ ಬಂದಿದ್ದು, ಆ ಪ್ರಕಾರ ಅನಧಿಕೃತದಾರನು ತನ್ನ ಸ್ವಂತ ಹಿಡುವಳಿ ಸಹಿತ ಆಕ್ರಮಿತ ಸ್ಥಳವು 2 ಹೆಕ್ಟೇರ್ ಮಿತಿಯೊಳಗೆ ಬರುವ ಕುಮ್ಕಿ ಜಮೀನನ್ನು ನಿಯಮಾನುಸಾರ ಸಕ್ರಮೀಕರಿಸಲು ಅವಕಾಶವಿದ್ದು ಆ ಪ್ರಕಾರ ನಮೂನೆ 53ರಡಿ ಸ್ವೀಕರಿಸಿದ ಅರ್ಜಿಗಳನ್ನು ತನಿಖೆ ಮಾಡಿ ನಿಯಮಾನುಸಾರ ಮಂಜೂರು ಮಾಡಲಾಗುತ್ತಿದೆ.

ಈ) ನಿಲ್ಲಿಸಿರುವುದಿಲ್ಲ.

ಉ) 'ಇ' ಪ್ರಶ್ನೆಗೆ ನೀಡಿರುವ ಉತ್ತರದನ್ವಯ ಕುಮ್ಕಿ ಜಮೀನನ್ನು ನಿಯಮಾನುಸಾರ ಸಕ್ರಮೀಕರಣಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 94 ರಡಿ ಅವಕಾಶ ಕಲ್ಪಿಸಲಾಗಿದೆ.

ಆದರೆ ಭಾರತದ ಶ್ರೇಷ್ಟ ನ್ಯಾಯಾಲಯ ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ನೀಡಿದ ತೀರ್ಪಿನಂತೆ ಕುಮ್ಕಿ ಹಕ್ಕನ್ನು ರದ್ದುಗೊಳಿಸಲು ಅವಕಾಶವಿಲ್ಲ ಆದರೆ ಸಾರ್ವಜನಿಕ ಉದ್ದೇಶಕ್ಕೆ ಕುಮ್ಕಿ ಜಮೀನುಗಳು ಬೇಕಾದಾಗ ಸರಕಾರದ ಅಧಿಸೂಚನೆ ಸಂ:ಆರ್‌ಡಿ 28 ಎಲ್‌ಎಡಬ್ಲ್ಯೂ 71, ದಿನಾಂಕ: 29.11.71 ರಂತೆ ಅಂತಹ ಜಮೀನುಗಳ ಕುಮ್ಕಿ ಹಕ್ಕನ್ನು ರದ್ದು ಪಡಿಸಿ ಸಾರ್ವಜನಿಕ ಉಪಯೋಗಕ್ಕೆ ಬಳಸಲು ಅವಕಾಶ ಕಲ್ಪಿಸಲಾಗಿದೆ.

739(983) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ(ಕುಂದಾಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಕ್ರಮ-ಜಮೀನು ಸಕ್ರಮೀಕರಣಗೊಳಿಸುವ ಬಗ್ಗೆ ಅರ್ಜಿ ಸಲ್ಲಿಸಲು ಮಾಹಿತಿಯ ಕೊರತೆಯಿಂದ ಬಹಳಷ್ಟು ಗ್ರಾಮಸ್ಥರು ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಬಂದಿದ್ದಲ್ಲಿ, ಅರ್ಜಿ ಸಲ್ಲಿಸಲು ಪುನಃ ಕಾಲವಕಾಶ ಒದಗಿಸಲಾಗುವುದೇ:

ಇ) ಅವಕಾಶ ನೀಡುವುದಾದಲ್ಲಿ ಯಾವ ದಿನಾಂಕದಿಂದ ಎಲ್ಲಯವರೆಗೆ ಅವಕಾಶ ನೀಡಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು)

ಅ) ಇಲ್ಲ.

ಆ) ಮತ್ತು ಇ) ಉದ್ಭವಿಸುವುದಿಲ್ಲ.

740(345) ಶ್ರೀ ಹಾಲಪ್ಪ ಹೆಚ್.(ಹೊಸನಗರ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ 2004-05 ನೇ ಸಾಲಿನಲ್ಲಿ ಸೆಂಟ್ರಲ್ ರೋಡ್ ಫಂಡ್ (CRF) ಯೋಜನೆಯಡಿಯಲ್ಲಿ ಪ್ರಸ್ತಾವನೆ ಸಲ್ಲಿಸಲಾದ ಕಾಮಗಾರಿಗಳೆಷ್ಟು ಹಾಗೂ ಮಂಜೂರಾದ ಕಾಮಗಾರಿಗಳೆಷ್ಟು?

ಶ್ರೀ ಎಂ.ಪಿ. ಪ್ರಕಾಶ್(ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ರಾಜ್ಯದಲ್ಲಿ 2004-05 ನೇ ಸಾಲಿನಲ್ಲಿ ಸೆಂಟ್ರಲ್ ರೋಡ್ ಫಂಡ್ (CRF) ಯೋಜನೆಯಡಿಯಲ್ಲಿ 326 ರಸ್ತೆ ಕಾಮಗಾರಿ ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಜುಲೈ 2004 ರಲ್ಲಿ ಸಲ್ಲಿಸಲಾಗಿತ್ತು. ಅದರಲ್ಲಿ 73 ಕಾಮಗಾರಿಗಳು ರೂ. 54.50 ಕೋಟಿಗಳ ಮೊತ್ತಕ್ಕೆ ಕೇಂದ್ರ ಸರ್ಕಾರದಿಂದ ಅಕ್ಟೋಬರ್ 2004 ರಲ್ಲಿ ಮಂಜೂರಾಗಿರುತ್ತದೆ.

ನಂತರ 13ನೇ ಜನವರಿ 2005 ರಲ್ಲಿ 123 ಕಾಮಗಾರಿಗಳನ್ನು 51.00 ಕೋಟಿ ರೂ.ಗಳ ಅಂದಾಜು ಮೊತ್ತಕ್ಕೆ ಕೇಂದ್ರ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿದೆ.

741(348) ಶ್ರೀ ಹಾಲಪ್ಪ ಹೆಚ್.(ಹೊಸನಗರ) : ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯು ಯುವಜನ ಸೇವಾ ಇಲಾಖೆಯಲ್ಲಿ ಇದುವರೆವಿಗೆ ನೋಂದಾಯಿಸಲಾದ ಸಂಘಗಳೆಷ್ಟು; ಇದರಲ್ಲಿ ಸರ್ಕಾರದ ಸೌಲಭ್ಯ ನೀಡಿರುವುದೆಷ್ಟು?